# ಮಡಚುವ ಕಾರು!





ಈಗ ಎಲ್ಲೆಲ್ಲೂ ಪಾರ್ಕಿಂಗ್ ಸಮಸ್ಯೆ. ನಿಮ್ಮ ಕಾರು ಪಾರ್ಕ್ ಮಾಡುವಾಗ 'ಅಬ್ಬಾ! ಕಾರು ಕೂಡಾ ಮಡಚಿ ಎಲ್ಲಿಯಾದರೂ ಇಟ್ಟು ಹೋಗುವ ಹಾಗಿದ್ದರೆ ಎಷ್ಟು ಚೆನ್ನಾಗಿತ್ತು' ಅಂತ ಒಮ್ಮೆಯಾದರೂ ಯೋಚನೆ ಮಾಡಿದ್ದೀರಿ ಅಲ್ಲವೇ?

ನಿಮ್ಮ ಇದೇ ಮನೋಭಿಲಾಷೆಯನ್ನು ದಕ್ಷಿಣ ಕೊರಿಯಾದ ಎಂಜಿನಿಯರರು ಕಂಡುಹಿಡಿದಿದ್ದಾರೆ. ಇದರ ಹೆಸರು ಆರ್ಮಡಿಲ್ಲೋ ಟಿ. (Armadillo–T ). ಇದು ವಿದ್ಯುತ್ ಚಾಲಿತ ಕಾರು. ಇದರ ಅಳತೆ 2.8 ಮೀಟರ್. ಇದನ್ನು 1.65 ಮೀಟರ್‌ವರೆಗೂ ಮಡಚಬಹುದು! ಇಂಥದ್ದೊಂದು ತಂತ್ರಜ್ಞಾನ ಇದರಲ್ಲಿ ಅಳವಡಿಸಲಾಗಿದೆ.

ಇಷ್ಟು ಚಿಕ್ಕ ಕಾರಿನಲ್ಲಿ ಇಬ್ಬರು ಕುಳಿತುಕೊಳ್ಳುವ ವ್ಯವಸ್ಥೆ ಇದೆ. ಈಗ ಎಲ್ಲೆಲ್ಲೂ ಸ್ಮಾರ್ಟ್ ಫೋನ್ ಕಾರುಬಾರು ಅಲ್ಲವೇ? ಇಲ್ಲೂ ಅದೇ ತಂತ್ರಜ್ಞಾನ. ಕಾರನ್ನು ಮಡಚಲು ಕೂಡ ಸ್ಮಾರ್ಟ್ ಫೋನ್ ಬಳಕೆ ಮಾಡಲಾಗುವುದು. ನಾಲ್ಕು ಎಲೆಕ್ಟ್ರಿಕ್ ಮೋಟಾರ್‌ನಿಂದ ಶಕ್ತಿಯನ್ನು ರವಾನಿಸುವ 13.6 ಕೆಡಬ್ಲ್ಯುಎಚ್ ಬ್ಯಾಟರಿ ಪ್ಯಾಕ್‌ನಿಂದ ಈ ಕಾರನ್ನು ನಿಯಂತ್ರಿಸಲಾಗುವುದು. ಇದರ ತೂಕ 450 ಕೆ.ಜಿ. ಗಂಟೆಗೆ 60 ಕೀ.ಮೀ. ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ. ಇದನ್ನು ಕೇವಲ 10 ನಿಮಿಷದೊಳಗೆ ರಿಚಾರ್ಜ್ ಮಾಡಬಹುದು. ಇಷ್ಟು ರಿಚಾರ್ಜ್ ಮಾಡಿದರೆ 100 ಕೀ.ಮೀ. ತನಕ ಆರಾಮವಾಗಿ ಓಡಿಸಬಹುದು.

ಆದರೆ ಕಾರನ್ನು ಮಡಚುವಾಗ ಮಾತ್ರ ಕಾರಿನಲ್ಲಿ ಯಾರೂ ಇರಬಾರದು ನೆನಪಿರಲಿ!

■ ಎಸ್.ಎನ್. ಸಿಂಚನಾ

